in unpleasant situation. Many a time, law and order problem has arisen.

It is long cherished desire of the citizens of Belgaum to have some big projects in the taluk such as. Factories, University etc. Taking into account the availability of excess sugarcane in the area and with an idea to develop industries in Belgaum taluka, some prominent citizens of Belgaum took a decision to start one more sugar factory in co-operative sector. Viability of the proposed factory (Markandva Sugar Factory) has been examined with reference to availability of sugarcane and other relevant factors. It is expected that this factory is going to be a great success. It is going to help the ryots of the area. Per capita income of the ryots will increase. Thus their standard of living will improve. The idea of starting this factory has nothing to do with the issues like language or politics etc. It is purely a sugarcane growers benefit oriented commercial venture.

This is in cooperative sector wherein State Government Central Financial Institutions will have a major share and also control. Practically, the factory will run under the administrative control of the Department of Co-operation of the State Government. No individual or group of individuals can administer the factory according to their whims and fancies. There will be a Government Officer as Managing Director.

Starting of Sugar Factory is to be decided on merit and its viability. Since there is agitation both, far and against starting this factory, Government will examine this issue in detail and take suitable decision.

ದಕ್ಷಿಣ ಕನ್ನಡ ಜಿಲ್ಲೆಗೆ ಖಜಾನೆಯಿಂದ ಎಲ್ಲಾ ಬಾಬುಗಳಿಗೆ ಹಣ ಬಿಡುಗಡೆ ಸಕಾಲದಲ್ಲಿ ಮಾಡದೇ ಇರುವುದು

ಶ್ರೀ ವಿನಯಕುಮಾರ್ ಸೊರಕೆ.— ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಗೆ ಖಜಾನೆಯಿಂದ ಹಣ ಬಿಡುಗಡೆಯಾಗದೆ ತುಂಬಾ ತೊಂದರೆಯಾಗಿದೆ. ಇದರಿಂದ ಇಷ್ಟರತನಕ ಚರಿತ್ರೆಯಲ್ಲಿಯೇ ಆಗದ ರೀತಿಯಲ್ಲಿ ಸಂಬಳ, ಪೆನ್ ಷನ್ ಅಭಿವೃದ್ಧಿ ಕೆಲಸ ಕಾರ್ಯಕ್ಕೆ ತುಂಬಾ ತೊಂದರೆಯಾಗಿದೆ. ಹೊಸ ವ್ಯವಸ್ಥೆಗೆ ಹೊಂದಿಕೊಂಡು ಜಿಲ್ಲಾ ಪರಿಷತ್ ಮಂಡಲ ಪಂಚಾಯತ್‌ಗಳು ರಚಿತವಾಗಿದ್ದರೂ ವಿವಿಧ ಕಾರ್ಯಕ್ರಮಗಳಿಗೆ ನಮೂದಿಸಲಾದ ಹಣದ ಬಿಡುಗಡೆ ಸಕಾಲದಲ್ಲಿ ಆಗಿರುವುದಿಲ್ಲ ಹಾಗೂ ಅನುದಾನವನ್ನು ಸರಕಾರ ಮನಬಂದಂತೆ ಆಗಾಗ ಕಡಿತ ಮಾಡಿರುತ್ತದೆ ಮೇಲ್ಕಂಡ ವಿಚಾರವನ್ನು ತೀವ್ರವಾಗಿ ಗಮನಿಸಿ ಎಲ್ಲಾ ಬಾಬುಗಳಿಗೂ ಕೂಡಲೇ ಹಣ ಬಿಡುಗಡೆ ಮಾಡಬೇಕಾಗಿ ತಮ್ಮ ಮುಖಾಂತರ ಸರಕಾರವನ್ನು ಒತ್ತಾಯಪಡಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ).— ಮಾನ್ಯ ಅಧ್ಯಕ್ಷರೇ, ಎಲ್ಲಾ ರೀತಿಯ ಸಂಬಳಗಳೂ ಪಿಂಚಣಿ ಮತ್ತು ಇತರ ಆಗತ್ಯ ಪಾವತಿಗಳನ್ನು ದಕ್ಷಿಣ ಕನ್ನಡ ಜಿಲ್ಲೆಯೂ ಒಳಗೊಂಡಂತೆ ರಾಜ್ಯದ ಎಲ್ಲೆಡೆಯಲ್ಲಿಯೂ ಪಾವತಿ ಮಾಡಲಾಗುತ್ತಿದೆ. ಆದರೆ ಭಾರತ ಸರ್ಕಾರದಿಂದ

ಆರ್ಥೋಪಾಯ ಆಗ್ರವಧನ ಹಾಗೂ ಓವರ್‌ಡ್ರಾಫ್ಟ್ ಸೌಲಭ್ಯಗಳನ್ನೊದಗಿಸುವಲ್ಲಿ ಕೆಲವು ನಿರ್ಭಂದನೆಗಳನ್ನು ವಿಧಿಸಿರುವುದರಿಂದ ಕೆಲವೊಂದು ಹೆಚ್ಚು ಪೊತ್ತದ ಪಾವತಿಗಳನ್ನು ಹಂತ ಹಂತವಾಗಿ ಬಿಡುಗಡೆ ಮಾಡಲಾಗುತ್ತಿದೆ. ಆದರೂ ಸಹ ಮಾನ್ಯ ಸದಸ್ಯರು ನೀಡಿರುವ ಸಲಹೆಗಳನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು ಮತ್ತು ಖಜಾನೆಯಿಂದ ಆದಷ್ಟು ಜಾಗ್ರತೆಯಾಗಿ ಹಣವನ್ನು ಬಿಡುಗಡೆ ಮಾಡಲಾಗುವುದು.

ಸಂಬಂಧಿಸಿದಂತೆ ನಿರ್ದಿಷ್ಟ ವಿವರಗಳನ್ನು ಮಾನ್ಯ ಸದಸ್ಯರು ನೀಡಿದಲ್ಲಿ ಅಂತಹ ಪಾವತಿಗಳನ್ನು ಖಾತರಿಗೊಳಿಸಲಾಗುವುದು.

ಅಧ್ಯಕ್ಷರು.— ಈಗ ವಿಧೇಯಕಗಳನ್ನು ಮಂಡಿಸುವುದು.

ಶಾಸನ ರಚನಾ ಕಲಾಪಗಳು

(೧) ೧೯೮೮ರ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿಗಳು ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ).— ಮಾನ್ಯ ಅಧ್ಯಕ್ಷರೇ, ೧೯೮೮ರ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು.— ಪ್ರಸ್ತಾವ ಏನೆಂದರೆ,— ''೧೯೮೮ರ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ನೀಡುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿಗಳು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ).— ಮಾನ್ಯ ಅಧ್ಯಕ್ಷರೇ, ೧೯೮೮ರ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ. *

(೨) ೧೯೮೮ರ ಕರ್ನಾಟಕ ಕೃಷಿ ಉತ್ಪನ್ನಗಳ ಮಾರಾಟ (ನಿಯಂತ್ರಣ) (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಕೆ. ಬಿ. ಪುಲ್ಲಪ್ಪ (ನಿಯಂತ್ರಿತ ಮಾರುಕಟ್ಟೆ ಮತ್ತು ಖಿಷ್ಕಿ ಜಮೀನು ಅಭಿವೃದ್ಧಿ ರಾಜ್ಯ ಮಂತ್ರಿಗಳು) — ಮಾನ್ಯ ಅಧ್ಯಕ್ಷರೇ, ೧೯೮೮ರ ಕರ್ನಾಟಕ ಕೃಷಿ ಉತ್ಪನ್ನಗಳ ಮಾರಾಟ (ನಿಯಂತ್ರಣ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೮೮ರ ಕರ್ನಾಟಕ ಕೃಷಿ ಉತ್ಪನ್ನಗಳ ಮಾರಾಟ (ನಿಯಂತ್ರಣ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

---

* ANNEXURE